Sri T. CHANNIAH.—The work must have been spread over several years. It cannot have been executed in one year.

Sri M. LINGANNA.—S they were taken up frhm 1947 ?

Sri T. CHANNIAH.—Possibly from 1945 onwards.

12-30 P.M.

ಶ್ರೀ ಎಸ್. ಗೋಪಾಲಗೌಡ.—9 ಚಿಲ್ಲರೆ ಮೈಲಿ ರಸ್ತೆಗಳನ್ನು 24 ಸಾವಿರ ರೂಪಾಯಿಗಳ ಖರ್ಚಿನಿಂದ ಮಾಡಲಾಗಿದೆ ಎಂದು ಹೇಳಿದರು. ಶ್ರೀಮಾನ್ ಶಿವನಂಜೇಗೌಡರು ಆ ರಸ್ತೆಯೇ ಇಲ್ಲ ಎಂದು ಹೇಳುತ್ತಾರೆ. ಈ ಆಪಾದನೆ ನಿಜವೇ, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.— ಅದನ್ನು ಪರಿಶೀಲಿಸುತ್ತೇನೆ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಅವರು ರಸ್ತೆ ಇಲ್ಲ ಎಂದು ಹೇಳುತ್ತಾರೆಯಲ್ಲಾ !

ಅಧ್ಯಕ್ಷರು.—ಪರಿಶೀಲನೆ ಮಾಡಿಸುತ್ತೇವೆ ಎಂದು ಹೇಳಿದ್ದಾರೆ.

Reversion of Officials of Municipalities from Superior to Inferior Service.

Q.—182 **Sri S. R. NAGAPPA SETTY** (Shimoga):—

Will the Government be pleased to state :—

(*a*) the number of officials working in municipalities in the State in respect of whom notice has been given torevert them from superior to inferior service after the constitution of the Public Service Commission ;

(*b*) the number of persons in respect of whom notices have been served terminating their services ;

(*c*) whether notice of reversion has been given to those that have completed 25 years of service ;

(*d*) whether exemption has been granted in Davangere Municipality and if so, to how many persons ;

(*e*) how many persons in Shimoga Municipality have been served with notices asking them to revert to inferior service ;

(*f*) whether the municipal council have sent a request to Government to grant them exemption in this behalf ?

1.—**Sri T. CHANNIAH** (Minister for Public Health and Local Self-Government).—

(*a*) Eight Officials in Shimoga District. There are no such instances in other Districts.

(*b*) Two persons (one in Chitaldrug District and one in Chickmagalur District).

(*c*) Yes, in respect of Shimoga District ;

and

No, in respect of Chitaldrug and Chickmagalur Districts ;

In other Districts, there are no such instances.

(*d*) Yes, 19 persons.

(*e*) Eight.

(*f*) Yes.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ 8 ಜನ ಮುನಿಸಿಪಲ್ ನೌಕರರನ್ನು 23-9-1947ರಲ್ಲಿ ಆಯಾ ಹುದ್ದೆಗಳಲ್ಲಿ ಖಾಯಂ ಮಾಡಿದೆಯಲ್ಲವೇ ?

ಶ್ರೀ ಟಿ. ಚನ್ನಯ್ಯ.—ಖಾಯಂ ಮಾಡಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಆತಾರೀಖಿನಲ್ಲಿ ಖಾಯಂಮಾಡಲಾಗಿದೆ ಎಂದು ಗೌವರ್ನಮೆಂಟ್ ಆರ್ಡರ್ ಇದೆಯಲ್ಲಾ ?

ಶ್ರೀ ಟಿ. ಚೆನ್ನಯ್ಯ.—ಅವರೆಲ್ಲಾ ರೆಕ್ರೂಟ್‌ಮೆಂಟ್ ರೂಲ್ಸ್‌ಗೆ ಅನುಸಾರವಾಗಿ ನೇಮಿಸಲ್ಪಡದ ಹಂಗಾಮಿ ನೌಕರರು. ಅವರು ಹಾಲಿ ಇರುವ ಸ್ಥಾನಗಳು ಸುಪೀರಿಯರ್ ಸರ್ವೀಸಸ್‌ಗೆ ಸೇರಿರುವುದರಿಂದ ಆಸ್ಥಾನಗಳಿಗೆ ರೂಲ್ಸ್‌ಗೆ ಅನುಸಾರವಾಗಿ ಯೋಗ್ಯತೆಯನ್ನು ಪಡೆದಿರತಕ್ಕವರನ್ನು ಮೇಕರೂರ್ ಮಾಡಬೇಕೆಂದು ಪಬ್ಲಿಕ್ ಸರ್ವಿಸ್ ಕಮೀಷ್ಷನವರು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—25 ವರ್ಷ ಸರ್ವಿಸ್ ಆಗಿದ್ದರೂ ಕೂಡ ಸುಪೀರಿಯರ್ ಸರ್ವಿಸ್‌ನಲ್ಲಿ ಕೆಲಸಮಾಡಲಿಕ್ಕೆ ಅನುಭವ, ಯೋಗ್ಯತೆ ಇಲ್ಲವೆಂತಲೇ ?

ಶ್ರೀ ಟಿ. ಚೆನ್ನಯ್ಯ.—ಅನುಭವವಿದೆ. ಆದರೆ ಅವರು ರೂಲ್ಸ್‌ಪ್ರಕಾರ ರೆಕ್ರೂಟ್ ಆಗಿಲ್ಲ ಮತ್ತು ಆ ಸ್ಥಾನಗಳಿಗೆ ತಕ್ಕ ಕ್ವಾಲಿಫಿಕೇಷ್ಷನನ್ನೂ ಪಡೆದಿಲ್ಲ. ಆದರೆ ಈಚೆಗೆ ಶಿವಮೊಗ್ಗಾ ನಗರ ಸಭೆಯವರಿಂದ ಈ ವಿಚಾರದಲ್ಲಿ ಮನವಿಗಳು ಬಂದಿವೆ. ಅವರು ಈ ನೌಕರರು ಬಹಳ ವರ್ಷಗಳಿಂದಲೂ ನರ್ಮಪಕವಾಗಿ ಸೇವೆ ಸಲ್ಲಿಸಿ ಅನುಭವಸ್ಥರಾಗಿರುತ್ತಾರೆಂದೂ, ಅವರನ್ನು ಕೆಲಸದಿಂದ ವಜಾಮಾಡಿದಲ್ಲಿ ಅವರಿಗೆ ತೊಂದರೆ ಉಂಟಾಗುವುದಲ್ಲದೆ ನಗರ ಸಭೆಯವರು ಅನುಭವಸ್ಥರಾದ ಅಧಿಕಾರಿಗಳನ್ನು ಕಳೆದುಕೊಂಡಂತಾಗುವುದೆಂದೂ ವರದಿಮಾಡಿದುದರ ಮೇಲೆ, ಈ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸಿ ಆ ನೌಕರರಿಗೆ exemption ಕೊಡುವ ವಿಷಯ ಸರ್ಕಾರದ ತೀವ್ರಾಲೋಚನೆಯಲ್ಲಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಚಿತ್ರದುರ್ಗ ಮುನಿಸಿಪಾಲಿಟಿಯಲ್ಲಿ ಒಬ್ಬರನ್ನು ಕೆಲಸದಿಂದ ಬರ ಖಾನ್ತುಮಾಡುವುದಾಗಿ ನೋಟೀಸ್ ಕೊಡಲಾಗಿದೆ ಎಂದು ತಿಳಿಸಿದ್ದೀರಿ.....

Sri T. CHANNIAH.—Certain officials who have put in 25 years of service have recently been reverted in Chitaldrug and Chikmagalur, on the ground

that they were not recruited according to rules or that they do not possess the requisite qualifications.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ದಾವಣಗೆರೆ ಮುನಿಸಿಪಾಲಿಟಿಯಲ್ಲಿ 19ಜನರಿಗೆ ನೌಕರಿ ಕೊಟ್ಟಿದೆ ಎಂದು ಹೇಳಿದ್ದೀರಿ. ಅದೇ ರೀತಿ ಬೇರೆ ಮುನಿಸಿಪಾಲಿಟಿಯವರಿಗೂ ಕೂಡ ಏಕೆ ಕೊಟ್ಟಿಲ್ಲ ?

ಶ್ರೀ ಟಿ. ಚನ್ನಯ್ಯ.—ಬೇರೆ ಮುನಿಸಿಪಾಲಿಟಿಗಳಲ್ಲಿ ಇಂತಹ ನಂದರ್ಭಗಳು ಉದ್ಭವವಾದಂತೆ ಕಂಡು ಬಂದಿಲ್ಲ.

Mr. SPEAKER.—The cases referred to by Sri Nagappa Setty have been approved and sanctioned on 25-7-53. He must thank the Government for it.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಶಿವಮೊಗ್ಗ ಮುನಿಸಿಪಾಲಿಟಿಯಲ್ಲಿ 8-10 ವರ್ಷಗಳಿಂದ ಸುಪೀರಿಯರ್ ಸರ್ವೀಸ್‌ನಲ್ಲಿ ಕೆಲಸಮಾಡಿದ್ದೂ ಪುನಃ ಈಗ ಇಫಿಷೀರಿಯರ್ ಸರ್ವಿಸ್‌ಗೆ ರಿವರ್ಟ್‌ಮಾಡಲು ಕಾರಣ ಏನು ?

ಶ್ರೀ ಟಿ. ಚನ್ನಯ್ಯ.—ಈ ರೀತಿ ಮಾಡಿದ್ದು ಪಬ್ಲಿಕ ಸರ್ವೀಸ್ ಕಮೀರ್ಷನವರ ಸಲಹೆಮೇರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಡಿಸ್ಪೆನ್ಸರಿಯಲ್ಲಿ ಒಬ್ಬರನ್ನು 10 ವರ್ಷ ಸರ್ವಿಸ್ ಆಗಿದ್ದರೂ ಕೆಲಸದಿಂದ ಬರಖಾಸ್ತುಮಾಡುವುದಾಗಿ ನೋಟೀಸ್ ಕೊಡಲಾಗಿದೆ. ಇದಕ್ಕೆ ಕಾರಣವೇನು ಸ್ವಾಮಿ ?

Mr. SPEAKER.—The case of those two persons may be re-examined.

Sri T. CHANNIAH.—All such case will be considered on their merits.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇದಕ್ಕೆ ಸಂಬಂಧಪಟ್ಟಂತೆ ಈಚೆಗೆ 8-10 ಜನ ಅರ್ಜಿಕೊಟ್ಟಿರುವದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ:—ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—(ಬ) ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ. ಅದು ಚಿಕ್ಕಮಗಳೂರಿನ ಯಾವ ಮುನಿಸಿಪಾಲಿಟಿಗೆ ಸಂಬಂಧಪಟ್ಟದ್ದು, ಸ್ವಾಮಿ ?

Sri T. CHANNIAH.—I want notice.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಪಬ್ಲಿಕ್ ಸರ್ವಿಸ್ ಕಮೀಷನರಿಂದ ನೇಮಿಸಲ್ಪಡತಕವರಿಗಿಂತ ಹತ್ತಾರು ವರ್ಷ ಸರ್ವೀಸ್‌ಮಾಡಿರತಕ್ಕವರು, ಸರ್ವೀಸ್‌ನಲ್ಲಿರತಕ್ಕವರು ತೃಪ್ತಿಕರವಾಗಿ ಕೆಲಸಮಾಡುತ್ತಾರೆ ಎಂಬುದು ನಿರ್ಧಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಕಾನೂನನ್ನು ಅನುಸರಿಸಿಯೇ ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—10 ವರ್ಷ ಸರ್ವೀಸ್ ಆದವರನ್ನು ರಿಟ್ರೆಂಚ್‌ಮಾಡಿದ್ದೀರಲ್ಲಾ ಅವರಿಗೆ ಬೇರೆ ಕಡೆ ಕೆಲಸ ಕೊಡಿಸುವುದಕ್ಕೆ ಯೋಚನೆ ಮಾಡಿದ್ದೀರಾ ?

Sri T. CHANNIAH.—Re-employment of retrenched officials is governed by separate set of rules and orders.

ಶ್ರೀ ಜಿ. ಪುಟ್ಟಸ್ವಾಮಿ.—ಆ standing instruction ಏನು ಎಂಬುದನ್ನು ಹೇಳುತ್ತೀರಾ ?

Mr. SPEAKER.—These two cases will be reconsidered. That has been promised. What further questions there can be, I cannot imagine !

SHORT NOTICE QUESTIONS AND ANSWERS.

Letting out water from the Krishnarajasagara to Visvesvaraya Channel.

Q.—5. **Sri B. NARAYANASWAMY** (Mysore).—

Will the Government be pleased to state:—

(*a*) the level of the Krishnarajasagara Reservoir from 27th June 1953 to 10th July 1953;

(*b*) when the water was let into Visvesvaraya Channel from the Reservoir ?

A.—**Sri Kadidal MANJAPPA** (Minister for Revenue and Public Works).—

(*a*) Level of the Krishnarajasagara Reservoir as it stood from 27th June (6 A.M.) to 10th July (6 A.M.), 1953:—

Date	*Time*	*Level*
27th June 1953	6 A.M.	58·72
28th ,,	,,	58.61
29th ,,	,,	58·59
30th ,,	,,	58·53
1st July 1953	,,	58.55
2nd ,,	,,	67.60
3rd ,,	,,	85·30
4th ,,	,,	97·10
5th ,,	,,	105·20
6th ,,	,,	111·90
7th ,,	,,	*121.50*
8th ,,	,,	*122.04*
9th ,,	,,	*121.80*
10th ,,	,,	*124.65*

(*b*) The Visvesvaraya Canal was opened for irrigation at 3 P.M. on 8th July 1953.

ಶ್ರೀ ಬಿ. ನಾರಾಯಣಸ್ವಾಮಿ.—ಸ್ವಾಮಿ, ಈ ನಾಲೆಯಲ್ಲಿ ನೀರು ಬಿಡುವುದಕ್ಕೆ ಇಷ್ಟು ತಡವಾಗಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ನೀರು ಇಲ್ಲದೇ ಇದ್ದದ್ದರಿಂದ.

ಶ್ರೀ ಬಿ. ನಾರಾಯಣಸ್ವಾಮಿ.—ಹೋದ ವರ್ಷ ಯಾವ ತಾರೀಖಿನಿಂದ ನೀರು ಬಿಡೋಣವಾಯಿತು ?